ಕರ್ನಾಟಕ ವಿಧಾನ ಸಭೆ

ಸೋಮವಾರ 21ನೇ ಡಿಸೆಂಬರ್ 2009 ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10–17 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೆ.ಜಿ. ಬೋಪಯ್ಯರವರು ಪೀಠವನ್ನು ಅಲಂಕರಿಸಿದ್ದರು.)

(10-00 AM)

(ಸದನವು ಬೆಳಗ್ಗೆ 10 ಗಂಟೆ 17 ನಿಮಿಷಕ್ಕೆ ಪ್ರಾರಂಭಗೊಂಡಾಗ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

ಅಧ್ಯಕ್ಷರು : ಈಗ ಪ್ರಶ್ನೋತ್ತರ.

1. ನಿಯಮ 60ರ ಅಡಿಯಲ್ಲಿ ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ :

ವಿಷಯ : ನೆರೆ ಮತ್ತು ಬರ ವಿಚಾರದ ಬಗ್ಗೆ :

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಿಯಮ 60ರ ಅಡಿಯಲ್ಲಿ ನಾನು ಒಂದು ನಿಲುವಳಿ ಸೂಚನೆಯನ್ನು ತಮ್ಮ ಕಚೇರಿಯಲ್ಲಿ ಕೊಟ್ಟಿದ್ದೇನೆ. ಬಹುಶಃ ತಾವು ಅದನ್ನು ನೋಡಿದ್ದೀರಿ ಎಂದು ನಾನು ಅಂದುಕೊಂಡಿದ್ದೇನೆ.

ಅಧ್ಯಕ್ಷರು : ಪ್ರಶ್ನೋತ್ತರವಾದ ಮೇಲೆ ಆ ವಿಷಯ ತೆಗೆದು ಕೊಳ್ಳೋಣ.

ಶ್ರೀ ಸಿದ್ದರಾಮಯ್ಯ : ಇಲ್ಲ. ಇದು ಬಹಳ ಪ್ರಾಮುಖ್ಯವಾದ ವಿಚಾರ. ಸಾರ್ವಜನಿಕವಾಗಿ ಅತ್ಯಂತ ಪ್ರಮುಖವಾಗಿರತಕ್ಕಂಥ ವಿಚಾರ. ನೆರೆ ಹಾವಳಿ ಮತ್ತು ಬರ ಈ ಎರಡು ವಿಚಾರಗಳನ್ನು ಪ್ರಸ್ತಾಪಿಸುವ ಸಲುವಾಗಿ ಕೊಟ್ಟಿದ್ದೇನೆ. ರಾಜ್ಯ ಸರ್ಕಾರ ಕಳೆದ ಎರಡೂವರೆ ತಿಂಗಳಿನಿಂದ, ನೆರೆ ಪರಿಹಾರದ ವಿಚಾರವಾಗಿ ಏನೇನು ಕ್ರಮಗಳನ್ನು ಕೈಗೊಂಡಿದೆ? ಸೆಪ್ಟೆಂಬರ್ ಕೊನೆಯವಾರ ಮತ್ತು ಅಕ್ಟೋಬರ್ ಮೊದಲನೆಯವಾರ, 29 ರಿಂದ 4 ನೇ ತಾರೀಖಿನವರೆಗೆ ಭಾರಿ ಮಳೆ ಬಂದು ಪ್ರವಾಹ ಬಂತು. ಅದರಿಂದ

ಅಪಾರವಾದಂಥ ಹಾನಿಯಾಗಿ ನೂರಾರು ಜನರು ಪ್ರಾಣ ಕಳೆದುಕೊಂಡಿದ್ದಾರೆ.

ಅಧ್ಯಕ್ಷರು : ಇದನ್ನು ನಾವು ಪ್ರಶ್ನೋತ್ತರವಾದ ಮೇಲೆ ತೆಗೆದು ಕೊಳ್ಳೋಣ.

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ಸಚಿವರು) : ಮಾನ್ಯ ಅಧ್ಯಕ್ಷರೆ, ಅವರೇನು ವಿಚಾರ ಈಗ ಪ್ರಸ್ತಾಪಿಸುತ್ತಿದ್ದಾರೆ, ಆ ವಿಚಾರದ ಗಂಭೀರತೆ ಮತ್ತು ಮಹತ್ವ ನಮಗೆ ಅರ್ಥವಾಗಿದೆ. ಆದರೆ ಪ್ರಶ್ನೆಯಿರುವುದು, ಇಲ್ಲಿ ಹದಿನೈದು ಜನ ಪ್ರಶ್ನೆ ಕೇಳಿದ್ದಾರೆ. ಇದರಲ್ಲಿ ಹನ್ನೆರಡು ಜನ ವಿರೋಧ ಪಕ್ಷದವರೇ ಕೇಳಿದ್ದಾರೆ. ಪ್ರಶ್ನೋತ್ತರ ಆಗಲಿ ನಂತರ ದಯವಿಟ್ಟು ಅವರು ಪ್ರಸ್ತಾಪ ಮಾಡಲಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ನಮ್ಮ ಸದನದಲ್ಲಿ ಏನಾಗಿದೆ ಎಂದರೆ, ನಿಯಮ 60ರ ಅಡಿಯಲ್ಲಿ ನಿಲುವಳಿ ಸೂಚನೆಯಾಗಿ ನಾವು ನೋಟೀಸ್ ಕೊಟ್ಟಾಗ ಪದೇ ಪದೇ ಪ್ರಶ್ನೋತ್ತರವಾದ ಮೇಲೆ ಎಂದು ಹೇಳಿ ನೀವು ಅದನ್ನು ನಿಯಮ 69ಕ್ಕೆ ಕನ್‌ವರ್ಟ್ ಮಾಡುವುದು, ಇದು ಒಂದು ರೀತಿ ಹೊಸ ರೂಲ್ ಆಗಿಬಿಟ್ಟಿದೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ಸಚಿವರು) : ನಾವು ಏನು ಮಾಡುವುದು ರೂಲ್ಸ್ ಇರುವುದು ಹಾಗೆ ಅಲ್ಲವೆ?

ಶ್ರೀ ಸಿದ್ದರಾಮಯ್ಯ : ಈಗ ಇದೊಂದು ಹೊಸ ರೂಲ್. ನಾವು ನಿಯಮ 60ರಲ್ಲಿ ನೋಟಿಸ್ ಕೊಟ್ಟರೆ, ನಿಯಮ 69ಕ್ಕೆ ಕನ್‌ವರ್ಟ್ ಮಾಡುತ್ತೀರಿ. ಇದರಿಂದಾಗಿ ನಿಯಮ 60ರ ಪ್ರಾಮುಖ್ಯತೆ ಹೋಗಿ ಬಿಡುತ್ತದೆ. ನಮ್ಮ ನಿಯಮಾವಳಿಗಳಲ್ಲಿ ನಾವು ಇದೆನ್ನೆಲ್ಲಾ ಇಟ್ಟುಕೊಂಡಿದ್ದೇವೆ. ಅದರಿಂದಾಗಿ ಇದರ ಪ್ರಾಮುಖ್ಯತೆ ಹೋಗಿ ಬಿಡುತ್ತದೆ. ಅದಕ್ಕೋಸ್ಕರ ನಾನು ತಮ್ಮಲ್ಲಿ ಮನವಿ ಮಾಡುವುದೇನೆಂದರೆ, ನಾನು ಪ್ರಸ್ತಾವಿಕವಾಗಿ ಈ ವಿಚಾರದ ಬಗ್ಗೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುತ್ತೇನೆ. ಬಹುಶಃ ತಾವು ಕನ್‌ವಿನ್ಸ್ ಆಗುತ್ತೀರಿ ಎನ್ನುವ ನಂಬಿಕೆ ನನಗೆ ಇದೆ. ಏಕೆಂದರೆ, ಸುಮಾರು ಹದಿನೈದು ಜಿಲ್ಲೆಗಳಲ್ಲಿ ಪ್ರವಾಹ ಬಂದಿದೆ. ಸುಮಾರು ಎರಡು ಕೋಟಿ ಜನರು ಪ್ರವಾಹದಲ್ಲಿ ಸಿಕ್ಕಿಹಾಕಿಕೊಂಡು ಕಷ್ಟದಲ್ಲಿದ್ದಾರೆ. ನೂರಾರು ಜನರು ಸತ್ತಿದ್ದಾರೆ. ಪ್ರಾಣಿಗಳು ಸತ್ತಿವೆ. ಮನೆ-ಮಠಗಳನ್ನು ಕಳೆದುಕೊಂಡಿದ್ದಾರೆ. ಜನರು ತಮ್ಮ ಬದುಕುಗಳನ್ನು ಕಳೆದುಕೊಂಡಿದ್ದಾರೆ.

ಇಂಥ ಪರಿಸ್ಥಿತಿಯಲ್ಲಿ ಮಾನ್ಯ ಯಡಿಯೂರಪ್ಪನವರ ಸರ್ಕಾರ ಪರಿಹಾರ ಕೊಡುವುದರಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಇವತ್ತಿನ ದಿವಸ ಜನರು ಹಾಹಾಕಾರ ಪಡುತ್ತಿದ್ದಾರೆ. ಆದ್ದರಿಂದ, ಈ ವಿಷಯದ ಬಗ್ಗೆ ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಆನಂತರ ಪ್ರಶ್ನೋತ್ತರ ವೇಳೆ ತೆಗೆದುಕೊಳ್ಳಿ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಆದ ತಕ್ಷಣವೇ ಈ ವಿಷಯದ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆ ತರುವಂಥ ಉದ್ದೇಶ ಏನೆಂದರೆ, ರಾಜ್ಯ ಹಿಂದೆ ಎಂದೂ ಕೂಡ ಕಂಡರಿಯದಂಥ ಸಮಸ್ಯೆಯನ್ನು ಎದುರಿಸುತ್ತಿದೆ. ಆ ಬಗ್ಗೆ ಪ್ರಸ್ತಾಪ ಮಾಡಬೇಕಾಗಿದೆ. ಇದರಲ್ಲಿ ಕೇವಲ ರಾಜ್ಯ ಸರ್ಕಾರದ ಜವಾಬ್ದಾರಿಕೆಯಲ್ಲದೆ ಕೇಂದ್ರ ಸರ್ಕಾರದ ಜವಾಬ್ದಾರಿಕೆ ಕೂಡ ಇರತಕ್ಕಂಥ ಹಿನ್ನಲೆಯಲ್ಲಿ ನಾವು ನಿಲುವಳಿ ಸೂಚನೆಯನ್ನು ತಂದಿದ್ದೇವೆ. ಆದ್ದರಿಂದ ತಾವು ಎಲ್ಲಾ ವಿಷಯ ಗಳನ್ನು ಬದಿಗಿಟ್ಟು ನಿಲುವಳಿ ಸೂಚನೆ ಮೂಲಕ ಈ ವಿಷಯವನ್ನು ಚರ್ಚೆ ಮಾಡಿದಾಗ ಅದರ ಘನತೆ ಹೆಚ್ಚಾಗುತ್ತದೆಂಬ ಕಾರಣಕ್ಕೋಸ್ಕರ ಇವತ್ತು ನಿಲುವಳಿ ಸೂಚನೆ ತಂದಿದ್ದೇವೆ.

ಅಧ್ಯಕ್ಷರು : ಪ್ರಶ್ನೋತ್ತರ ಆದ ತಕ್ಷಣ ಅವಕಾಶ ಕೊಡುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ : ಇದಕ್ಕಿಂಥ ಮಹತ್ವವಾದ ವಿಷಯ ಯಾವುದಾದರು ಇದೆಯೇ? ಇಂಥ ವಿಷಯವನ್ನು ಚರ್ಚೆ ಮಾಡಬೇಕೆಂಬ ಉದ್ದೇಶದಿಂದ ಇವತ್ತಿನ ದಿವಸ ವಿಧಾನ ಸಭೆ ಸೇರಿರುವುದಲ್ಲದೆ ಇಡೀ ಉತ್ತರ ಕರ್ನಾಟಕದ ಜನರು ವಿಧಾನ ಸಭೆ ಕಡೆಗೆ ನೋಡುವಂಥ ಸಂದರ್ಭ ಇದೆ. ಆದ್ದರಿಂದ, ನಿಲುವಳಿ ಸೂಚನೆಗೆ ತಾವು ಒಪ್ಪಿಗೆ ಕೊಟ್ಟರೆ ಬಹುಶಃ ಈ ನಿಯಮಾವಳಿಗೆ ಒಂದು ಘನತೆ ಬರುತ್ತದೆ. ಮತ್ತೆ ಕೇಂದ್ರ ಸರ್ಕಾರ ಕೂಡ ಇದರ ಬಗ್ಗೆ ಗಮನಹರಿಸುತ್ತದೆಂಬ ಹಿನ್ನೆಲೆಯಲ್ಲಿ ಇವತ್ತು ಕೇಳಿದ್ದೇವೆ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆಯಾದ ಮೇಲೆ ನೀವು ಪ್ರಿಲಿಮಿನರಿ ಸಬ್‌ಮಿಷನ್ ಮಾಡಿ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಾವು ಪ್ರಸ್ತಾಪ ಮಾಡುವುದಕ್ಕಿಂಥ ಮುಂಚಿತವಾಗಿಯೇ ತಾವು ತೀರ್ಮಾನ ಕೊಟ್ಟರೆ ನಾವೇನು ಮಾಡುವುದು?

ಅಧ್ಯಕ್ಷರು : ನಾವು ಯಾವುದೇ ತೀರ್ಮಾನ ಕೊಟ್ಟಿಲ್ಲ. ಇರುವ ನಿಯಮದ ಬಗ್ಗೆ ಹೇಳಿದ್ದೇನಷ್ಟೆ. I have not given any decision.

ಶ್ರೀ ಟಿ.ಬಿ.ಜಯಚಂದ್ರ : ನೀವು ಇಲ್ಲಿಂದ ಅಲ್ಲಿಗೆ ಹೋಗಿ ಕುಳಿತುಕೊಂಡಿರುವುದು ನಮಗೆ ಸಂತೋಷದ ವಿಷಯವಾಗಿದೆ. ದಯಮಾಡಿ ತಾವು ನಮ್ಮ ಕಡೆಗೂ ನೋಡಬೇಕು.

Mr. SPEAKER : I have not given any decision.

ಶ್ರೀ ಟಿ.ಬಿ.ಜಯಚಂದ್ರ : ಆಗಲಿ ಪರವಾಗಿಲ್ಲ. we will wait for it. ನಿಲುವಳಿ ಸೂಚನೆಯ ಮಹತ್ವ ಏನೆಂಬುದನ್ನು ಅರ್ಥ ಮಾಡಿಕೊಳ್ಳಿ. ಇವತ್ತು ಇಷ್ಟೊಂದು ಸಮಸ್ಯೆ ಇಟ್ಟುಕೊಂಡು ವಿರೋಧಪಕ್ಷದವರಾಗಿ ನಾವು ಈ ಬಗ್ಗೆ ಪ್ರಸ್ತಾಪ ಮಾಡಬೇಕಾಗುತ್ತದೆ. ಇದರ ಬಗ್ಗೆ ತೀರ್ಮಾನ ನಿಮ್ಮದು ಇರುತ್ತದೆ. ಅದು ಬೇರೆ ಪ್ರಶ್ನೆ.

ಶ್ರೀ ಕೆ.ಎಸ್.ಈಶ್ವರಪ್ಪ : ತಮ್ಮ ಡ್ಯೂಟಿಯನ್ನು ತಾವು ಮಾಡುತ್ತಿದ್ದೀರಿ.

ಶ್ರೀ ಟಿ.ಬಿ.ಜಯಚಂದ್ರ : ಇದರ ಬಗ್ಗೆ ಕೇವಲ ನಾವಲ್ಲದೆ ನಿಮ್ಮ ಕಡೆಯವರು ಒಪ್ಪಿಗೆ ಕೊಡುವಂಥವರು ಇದ್ದಾರೆ. ಆದ್ದರಿಂದ, ಇದರ ಬಗ್ಗೆ ಚರ್ಚೆಯಾಗಬೇಕಾಗುತ್ತದೆ. ಈ ಒಂದು ಕಾರಣದಿಂದ ಈ ವಿಷಯವನ್ನು ಈಗ ಪ್ರಸ್ತಾಪ ಮಾಡುತ್ತಿದ್ದೇವೆ.

ಅಧ್ಯಕ್ಷರು : ಹಾಗಾದರೆ, ಈಗ ಪ್ರಶ್ನೋತ್ತರ ಬೇಡವೆಂದು ಹೇಳುತ್ತಿದ್ದೀರಾ?

ಶ್ರೀ ಟಿ.ಬಿ.ಜಯಚಂದ್ರ : ಪ್ರಶ್ನೋತ್ತರ ಬೇಡವೆಂದು ಹೇಳುತ್ತಿಲ್ಲ. ಇದರ ತೀರ್ಮಾನ ನಿಮಗೆ ಬಿಟ್ಟಿರತಕ್ಕಂಥದ್ದು. ಆದರೆ, ಈ ವಿಚಾರದ ಮಹತ್ವ ಏನೆಂಬುದರ ಬಗ್ಗೆ ತಮ್ಮ ಗಮನಕ್ಕೆ ತರುವಂಥ ಪ್ರಯತ್ನವನ್ನು ಮಾಡುತ್ತಿದ್ದೇವೆ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಆದ ನಂತರ ಈ ವಿಷಯವನ್ನು ಪ್ರಸ್ತಾಪ ಮಾಡಿ ಎಂದು ನಾನು ಹೇಳುತ್ತಿದ್ದೇನಷ್ಟೆ. ಈಗ ಪ್ರಶ್ನೋತ್ತರ ತೆಗೆದುಕೊಳ್ಳೋಣ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಸುಮಾರು 16 ಜಿಲ್ಲೆಯಲ್ಲಿ ಆಗಿರುವಂಥ ನೆರೆಹಾವಳಿಯಿಂದ ಸುಮಾರು 250 ಕ್ಕಿಂಥ ಹೆಚ್ಚು ಜನ ಸಾವನ್ನಪ್ಪಿದ್ದಾರೆ.

ಅಧ್ಯಕ್ಷರು : ಪ್ರಶ್ನೋತ್ತರ ಆದ ನಂತರ ಅವಕಾಶ ಕೊಡುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ : ಪ್ರಶ್ನೋತ್ತರವನ್ನು ಸ್ವಲ್ಪ ಬದಿಗೊತ್ತಿ. ಸುಮಾರು 20 ಸಾವಿರ ಕೋಟಿ ರೂಪಾಯಿ ಹಾನಿಯಾಗಿದೆ ಎಂದು ಮಾನ್ಯ ಮುಖ್ಯಮಂತ್ರಿಯವರೆ ಹೇಳಿದ್ದಾರೆ. ಆದ್ದರಿಂದ, ಅದರ ಬಗ್ಗೆ ವಿಶೇಷವಾಗಿ ಚರ್ಚೆ ಮಾಡಬೇಕಾಗಿದೆ. ಪ್ರಶ್ನೋತ್ತರವನ್ನು ಆನಂತರ ತೆಗೆದುಕೊಳ್ಳಿ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಆದ ತಕ್ಷಣವೇ ತೆಗೆದುಕೊಳ್ಳೋಣ.

ಶ್ರೀ ಹೆಚ್.ಡಿ.ರೇವಣ್ಣ : ಹಾಗಾದರೆ, ನಿಯಮ 60 ಅಡಿಯಲ್ಲಿನ ನಿಲುವಳಿ ಸೂಚನೆಗೆ ಏನೂ ಬೆಲೆ ಇಲ್ಲದಂತಾಯಿತು?

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಆದ ನಂತರವೇ ನಿಯಮ 60ಕ್ಕೆ ಅವಕಾಶ ಎಂದು ನಿಯಮದಲ್ಲಿದೆ.

ಶ್ರೀ ಹೆಚ್.ಡಿ.ರೇವಣ್ಣ : ಪ್ರಶ್ನೋತ್ತರ ವೇಳೆಯನ್ನು ಬದಿಗೊತ್ತಿ. ಈ ಚರ್ಚೆ ಮುಗಿದ ನಂತರ ಪ್ರಶ್ನೋತ್ತರವನ್ನು ತೆಗೆದುಕೊಳ್ಳಿ. ನಾವೇನು ಬೇಡವೆಂದು ಹೇಳುವುದಿಲ್ಲ.

ಅಧ್ಯಕ್ಷರು : Rule 60ಯನ್ನು after question hour ತೆಗೆದು ಕೊಳ್ಳಬೇಕೆಂದು ನಿಯಮದಲ್ಲಿದೆ. ದಯವಿಟ್ಟು ಕುಳಿತುಕೊಳ್ಳಿ. ಈಗ ಪ್ರಶ್ನೋತ್ತರ ವೇಳೆ.

2. ಪ್ರಶ್ನೋತ್ತರಗಳು :

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು :

ಶ್ರೀರಂಗಪಟ್ಟಣ ಕ್ಷೇತ್ರ ವ್ಯಾಪ್ತಿಯಲ್ಲಿ ಕೈಗಾರಿಕಾ ಪ್ರದೇಶಾಭಿವೃದ್ಧಿ ಬಗ್ಗೆ :

459 ಶ್ರೀ ರಮೇಶ ಬಂಡಿಸಿದ್ದೇಗೌಡ ಎ.ಬಿ (ಶ್ರೀರಂಗಪಟ್ಟಣ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ತೂಬಿನಕೆರೆಯಲ್ಲಿ ಕೈಗಾರಿಕಾ ಅಭಿವೃದ್ಧಿ ಮಂಡಳಿಯಿಂದ ಎಷ್ಟು ಕೈಗಾರಿಕಾ ಶೆಡ್‌ಗಳನ್ನು ನಿರ್ಮಾಣ ಮಾಡಲಾಗಿದೆ;

ಆ) ಮಲ್ಲಾಡಿ ಬಯೋಟೆಕ್ ಸಂಸ್ಥೆಯನ್ನು ಯಾವುದೇ ಮುನ್ಸೂಚನೆ ಯಿಲ್ಲದೆ ಮುಚ್ಚಲು ಕಾರಣವೇನು;